ಓ ಎಸ್ ನಂ.406 /2014

ಡಿ ಡಬ್ಲ್ಯೂಃ 1

ದಿ. 24-11-2018 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **ಶ್ರೀ** ಕೆ.ಎಂ. **ವಕೀಲರಿಂದಃ**

ನಾನು ಪಿಯುಸಿ ವರೆಗೆ ಓದಿರುತ್ತೇನೆ. ವಾದಿ ಏನು ದಾವೆ ಹೂಡಿರುತ್ತಾರೆ ಎಂದು ತಿಳಿದುಕೊಂಡಿರುತೆತೇನೆ. ವಾದಿ ಯಾರ ಯಾರ ವಿರುದ್ಧ ದಾವೆ ಹೂಡಿರುತ್ತಾರೆ ಎಂದು ನನಗೆ ಗೊತ್ತು. ಕೆಂಕೆರೆ ಸ.ನಂ.106/1 ರಲ್ಲಿ 6 ಎಕರೆ 3 ಗುಂಟೆ ಸ.ನಂ.102/2 ರಲ್ಲಿ 6 ಎಕರೆ 10 ಗುಂಟೆ ಜಮೀನು ಒಟ್ಟು 12 ಎಕರೆ 13 ಗುಂಟೆ ಜಮೀನು ಮೃತ ಭೈರಪ್ಪನವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ವಾದಿಯರಿಗೂ ಮತ್ತು ನಮಗೂ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಭೈರಪ್ಪನಿಗೆ ಇಬ್ಬರು ಗಂಡು ಮಕ್ಕಳು ಮತ್ತು 6 ಜನ ಹೆಣ್ಣು ಮಕ್ಕಳು ಎಂದರೆ ಸರಿ. ವಾದಿಯ ತಾಯಿ ಸಿದ್ದಗಂಗಮ್ಮ ಭೈರಪ್ಪನ ಮೊದಲನೆ ಮಗಳು ಎಂದರೆ ಸರಿ. ಭೈರಪ್ಪನಿಗೆ ತಿಪ್ಪೇಸ್ವಾಮಿ ಮತ್ತು ದ್ಯಾಮಣ್ಣ ಗಂಡು ಮಕ್ಕಳು ಎಂದರೆ ಸರಿ. ಭೈರಪ್ಪನ 4 ನೇ ಮಗಳು ಶಿವಗಂಗಮ್ಮ ಎಂದರ ಸರಿ. 5 ನೇ ಮಗಳು ರತ್ನಮ್ಮ ಎಂದರೆ ಸರಿ. 6 ನೇ ಮಗಳು ವನಜಾಕ್ಷಮ್ಮ ಎಂದರೆ ಸರಿ. 7 ನೇ ಮಗಳು ಶಾಂತಮ್ಮ ಎಂದರೆ ಸರಿ. ನಾನು 8 ನೇ ಮಗಳು ಎಂದರೆ ಸರಿ.

ಭೈರಪ್ಪನ ಮೊದಲನೆ ಮಗಳಾದ ಸಿದ್ದಗಂಗಮ್ಮನಿಗೆ ವಾದಿಯರು ಮಕ್ಕಳು ಎಂದರೆ ಸರಿಯಲ್ಲ. ಸಿದ್ದಗಂಗಮ್ಮನಿಗೆ ಮಕ್ಕಳು ಆಗಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸಿದ್ಧಂಗಮ್ಮನಿಗೆ ಮಕ್ಕಳು ಆಗಿರುತ್ತಾರೋ ಇಲ್ಲವೋ ಎಂದು ನನ್ನ ಪ್ರಮಾಣ ಪತ್ರ ಮತ್ತು ತಕರಾರಿನಲ್ಲಿ ಬರೆಸಿಲ್ಲ ವಾದಿಯರು ಸಿದ್ದಗಂಗಮ್ಮನ ಮಕ್ಕಳು ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಭೈರಪ್ಪನ ಮಗ ತಿಪ್ಪೇಸ್ವಾಮಿಗೆ ಕವಿತಾ ಮತ್ತು ಮಹಂತೇಶ್ ಎಂಬ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ತಿಪ್ಪೇಸ್ವಾಮಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಭೈರಪ್ಪನ ಮಗಳು ಸಿದ್ದಗಂಗಮ್ಮ ದಾವೆ ಹೂಡುವ ಮುನ್ನ ಸುಮಾರು 25 ವರ್ಷಗಳ ಹಿಂದೆ ಕಾಣೆಯಾಗಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದಗಂಗಮ್ಮ ಮನೆ ಬಿಟ್ಟು ಹೋಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ 12 ಎಕರೆ 13 ಗುಂಟೆ ಜಮೀನನ್ನು ಭೈರಪ್ಪ ಮತ್ತು ಆತನ ಇಬ್ಬರು ಗಂಡು ಮಕ್ಕಳು 6 ಜನ ಹೆಣ್ಣು ಮಕ್ಕಳಿಗೆ ತಲಾ 2 ಎಕರೆಯಂತೆ ಅರಿಶಿಣ ಕುಂಕುಮಕ್ಕೆ ಎಂದು ನೀಡಿರುತ್ತಾರೆ ಎಂದರೆ ಸರಿಯಲ್ಲ. ಭೈರಪ್ಪ ಮತ್ತು ಆತನ ಮಕ್ಕಳು ಉಳಿದ 13 ಗುಂಟೆ ಜಮೀನನ್ನು ಪಕ್ಕದಲ್ಲಿರುವ ಈಶ್ವರ ದೇವಸ್ಥಾನಕ್ಕೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಭೈರಪ್ಪ ಮತ್ತು ಆತನ ಮಕ್ಕಳ ಮಧ್ಯೆ6 ಜನ ಹೆಣ್ಣುಮಕ್ಕಳಿಗೆ ತಲಾ 2 ಎಕರೆ ಜಮೀನು ಕೊಟ್ಟ ಬಗ್ಗೆ ಒಪ್ಪಿಗೆ ಇರುತ್ತದೆ ಎಂದರೆ ಸರಿಯಲ್ಲ. ಭೈರಪ್ಪನ ಮರಣಾ ನಂತರ ವಾದಿಯ ತಾಯಿ ಸಿದ್ದಗಂಗಮ್ಮ ಮತ್ತು 5 ರಿಂದ 9 ನೇ ಪ್ರತಿವಾದಿಯಾದ ನಾವು ಸದರಿ ಸ್ವತ್ತುಗಳನ್ನು ಜಂಟಿಯಾಗಿ ಅನುಭವಿಸುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರ ತಾಯಿ ಸಿದ್ದಗಂಗಮ್ಮ 5 ರಿಂದ 9 ನೇ ಪ್ರತಿವಾದಿಯರ ಮೂಲಕವೇ ಸದರಿ ಸ್ವತ್ತುಗಳ ಕಂದಾಯವನ್ನು ಭರಿಸುತ್ತಿದ್ದರು ಎಂದರೆ ಸರಿಯಲ್ಲ. ವಾದಿಯರ ತಾಯಿ ಸಿದ್ದಗಂಗಮ್ಮ ಮತ್ತು 5 ರಿಂದ 8 ನೇ ಪ್ರತಿವಾದಿಯರ ಪರವಾಗಿ ವಿದ್ಯಾವಂತಳಾದ ನಾನು ಸದರಿ ಸ್ವತ್ತುಗಳನ್ನು ವ್ಯವಸ್ಥಿತವಾಗಿ ಬೇಸಾಯ ಮಾಡಿಕೊಂಡು ಬರುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಲ್ಲಿ ಕೆಲಸ ಇದ್ದಾಗ ವಾದಿಯರ ತಾಯಿ ಮತ್ತು 5 ರಿಂದ 8 ನೇ ಪ್ರತಿವಾದಿಯರು ನನಗೆ ನೆರವು ನೀಡುತ್ತಿದ್ದರು ಎಂದರೆ ಸರಿಯಲ್ಲ.

ಸದರಿ ಸ್ವತ್ತುಗಳಲ್ಲಿ ಬೆಳೆದ ಬೆಳೆಯಿಂದ ಬಂದ ಉತ್ಪನ್ನವನ್ನು ನಾನೇ ವಾದಿಯರ ತಾಯಿ ಮತ್ತು 5 ರಿಂದ 8 ನೇ ಪ್ರತಿವಾದಿಯರಿಗೆ ಕಳುಹಿಸಿಕೊಡುತ್ತಿದ್ದೆ ಎಂದರೆ ಸರಿಯಲ್ಲ. ವಾದಿಯರ ತಾಯಿ ಸಿದ್ದಗಂಗಮ್ಮ ಮನೆಬಿಟ್ಟು ಹೋಗಿರುವ ಸಂಗತಿಯ ಅನುಕೂಲ ಪಡೆದು ನಾನು ಮತ್ತು 5 ರಿಂದ 8 ನೇ ಪ್ರತಿವಾದಿಯರು ಸದರಿ ಸ್ವತ್ತುಗಳ ಖಾತೆಗಳನ್ನು ತಲಾ 2 ಎಕರೆಯಂತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಸ.ನಂ.107/1 ರ ಜಮೀನಿನಲ್ಲಿ ನನಗೂ ಮತ್ತು 5 ನೇ ಪ್ರತಿವಾದಿ ರತ್ನಮ್ಮರವರಿಗೂ ತಲಾ 2 ಎಕರೆ ಜಮೀನುಗಳ ದಾಖಲೆ ಖಾತೆ ಆಗಿರುತ್ತದೆ ಎಂದರೆ ಸರಿ. ಮಿಕ್ಕ 2 ಎಕರೆ 3 ಗುಂಟೆ ಜಮೀನು ಪೌತಿ ಆಧಾರದ ಮೇಲೆ ನನ್ನ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಆ ರೀತಿ ಖಾತೆಯನ್ನು ವಾದಿಯರ ತಾಯಿ ಇಲ್ಲದ ಸಂದರ್ಭದಲ್ಲಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರ ತಾಯಿ ಇಲ್ಲದ ಸಮಯದಲ್ಲಿ ಮತ್ತು ವಾದಿಯರಿಗೆ ತಿಳಿಯದಂತೆ ಯಾವುದೇ ಆಧಾರವಿಲ್ಲದಿದ್ದರೂ ಸಹ ನಮ್ಮ ಹೆಸರುಗಳಿಗೆ ಖಾತೆಗಳನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಉಳಿದ 2 ಎಕರೆ 3 ಗುಂಟೆ ಜಮೀನನ್ನು ರೆವಿನ್ಯೂ ಅಧಿಕಾರಿಗಳೊಂದಿಗೆ ಶರೀಕಾಗಿ ಬೈರಪ್ಪನ ಹೆಸರಿನಲ್ಲಿ ಉಳಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ 2 ಎಕರೆ 3 ಗುಂಟೆ ಜಮೀನನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳುವ ದುರುದ್ದೇಶದಿಂದ ಅದರ ಖಾತೆಯನ್ನು ಬೈರಪ್ಪನ ಹೆಸರಿನಲ್ಲೇ ಉಳಿಸಿದ್ದೆವು ಎಂದರೆ ಸರಿಯಲ್ಲ. ಸದರಿ ಖಾತೆ ಬದಲಾವಣೆಯನ್ನು ರೆವಿನ್ಯೂ ಅಧಿಕಾರಿಗಳೊಂದಿಗೆ ಶರೀಕಾಗಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ವಾದಿಯರ ತಾಯಿ ಸಿದ್ದಗಂಗಮ್ಮನಿಗೆ 6 ನೇ 1 ಭಾಗ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಬೈರಪ್ಪನ ಮಗಳು ಸಿದ್ದಗಂಗಮ್ಮ ವಾದಿಯರನ್ನು ವಾರಸುದಾರರನ್ನಾಗಿ ಬಿಟ್ಟುಹೋಗಿರುತ್ತಾರೆ ಎಂದರೆ ಸರಿಯಲ್ಲ. ಸಿದ್ದಗಂಗಮ್ಮನ ಆಸ್ತಿಗೆ ವಾದಿಯರು ವಾರಸುದಾರರಾಗಿರುತ್ತಾರೆ ಎಂದರೆ ಸರಿಯಲ್ಲ.

ವಾದಿಯರಿಗೆ ದಾವಾ ಆಸ್ತಿಗಳಲ್ಲಿ 6 ನೇ 1 ಭಾಗದ ಹಕ್ಕು ಇದ್ದು, ಅವರುಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾವು ಕಾನೂನು ಬಾಹೀರವಾಗಿ ಖಾತೆ ಮಾಡಿಸಿಕೊಂಡಿರುವ ಬಗ್ಗೆ ತಿಳಿದು, ವಾದಿಯರು 2013 ನೇ ಸಾಲಿನಲ್ಲಿ ಬಂದು ತಮ್ಮ ಪಾಲಿನ ಆಸ್ತಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ತಮ್ಮ ಭಾಗ ಕೇಳಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಯಾವುದೇ ಪಾಲು ಇರುವುದಿಲ್ಲ ಎಂದು ನಿರಾಕರಿಸಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಹಾಕುವ ಮುನ್ನ ವಾದಿಯರು 1 ಮತ್ತು 4 ರಿಂದ 9 ನೇ ಪ್ರತಿವಾದಿಯರ ವಿರುದ್ಧ ಮೂಲ ದಾವಾ ಸಂಖ್ಯೆ:230/2013 ರ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಕೆಲವು ನ್ಯೂನ್ಯತೆಗಳು ಕಂಡುಬಂದಿದ್ದರಿಂದ ವಾದಿಯರು ದಾವೆ ವಾಪಾಸ್ಸು ಪಡೆದು ಈ ದಾವೆ ಹೂಡಿರುತ್ತಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ, ಮುಂದೂಡಲಾಯಿತು.

(ತೆ.ನ್ಯಾಯಾಲಯದಲ್ಲಿ ನನ್ನ ಉತ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಸಿ/ಸಿ ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ

ಹೊಸದುರ್ಗ .